ಓ ಎಸ್ ನಂ. 119/2018
ಪಿ ಡಬ್ಲ್ಯು 1
ದಿನಾಂಕ 17/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ೭ ರಿಂದ ೧೩ ನೇ ಪ್ರತಿವಾದಿಗಳ ಪರಃ ಶ್ರೀ ಎನ್ ಎಸ್ ವಕೀಲರಿಂದಃ

ನಿಪಿ-1 ರ ಆರ್ ಟಿ ಸಿ ಯಲ್ಲಿ ನಮೂದಿರುವ ರಂಗಪ್ಪ ಓಬಳಪ್ಪ ಬಿನ್ ಹನುಮಯ್ಯ ಯಾರು ಎಂದರೆ ಸಾಕ್ಷಿ ರಂಗಪ್ಪ ನನ್ನ ಅಜ್ಜನಾಗಿದ್ದು, ಓಬಳಪ್ಪರವರು 7 ನೇ ಪ್ರತಿವಾದಿ ಹನುಮಂತಪ್ಪರವರ ತಂದೆ ಎಂದು ನುಡಿಯುತ್ತಾರೆ. ಸದರಿ ಓಬಳಪ್ಪರವರ ತಂದೆಯ ಹೆಸರು ರಂಗಪ್ಪ ಎಂದರೆ ಸಾಕ್ಷಿ ಇಲ್ಲ ಹನುಮೇಗೌಡ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರು ನಿಪಿ-5 ರ ಆರ್ ಟಿ ಸಿಯಲ್ಲಿ ರಂಗಪ್ಪನ ಓಬಳಪ್ಪ ಎಂದು ನಮೂದಿದೆ ಎಂದರೆ ಸಾಕ್ಷಿ ಅದನ್ನು 1992 ರಲ್ಲಿ ಫೋರ್ಜರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-4 ರ ಆರ್ ಟಿ ಸಿಯಲ್ಲೂ ಸಹ ರಂಗಪ್ಪನ ಓಬಳಪ್ಪ ಎಂದು ನಮೂದಿದೆ ಎಂದರೆ ಸರಿ. ನಿಪಿ-4 ಮತ್ತು 5 ರ ಆರ್ ಟಿ ಸಿ ಗಳು 1981 ರಿಂದ 1990-91 ರವರೆಗೆ ಇರುವಂತಹದ್ದು ಎಂದರೆ ಸಾಕ್ಷಿ ದಾಖಲೆ ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. 1992 ರಲ್ಲಿ ಫೋರ್ಜರಿಯಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರ

ಆರ್ ಟಿ ಸಿ ಯಲ್ಲಿ ಟಿ ಹೆಚ್ ಹನುಮಂತಪ್ಪ ಬಿನ್ ರಂಗಯ್ಯನ ಓಬಳಪ್ಪ ಎಂದು ನಮೂದಿದೆ ಎಂದರೆ ಸಾಕ್ಷಿ ಫೋರ್ಜರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಟಿ ಹೆಚ್ ಹನುಮಂತಪ್ಪರವರ ಹೆಸರಿಗೆ ಖಾತೆ ಎಂ ಆರ್ ನಂ.30/1992-93 ರಂತೆ ಬಂದಿರುತ್ತದೆ ಎಂದರೆ ಸಾಕ್ಷಿ ಅರ್ಧ ಭಾಗ ಮಾತ್ರ ಅವರ ಹೆಸರಿಗೆ ಖಾತೆ ಆಗಿದೆ ಎಂದು ನುಡಿಯುತ್ತಾರೆ. ನಿಪಿ-7 ರ ಆರ್ ಟಿ ಸಿ 6 ಎಕರೆ 36 ಗುಂಟೆ ಜಮೀನು ಟಿ ಹೆಚ್ ಹನುಮಂತಪ್ಪ ಬಿನ್ ರಂಗಪ್ಪನ ಓಬಳಪ್ಪ ಎಂಬ ಹೆಸರಿನಲ್ಲಿ ನಮೂದಿರುತ್ತದೆ ಎಂದರೆ ಸಾಕ್ಷಿ ಅದನ್ನು ಫೋರ್ಜರಿ ಮಾಡಿರುತ್ತಾರೆ, ಅಲ್ಲಿ ನಮೂದಿರುವ ರಂಗಪ್ಪ ನನ್ನ ಅಜ್ಜ ಎಂದು ನುಡಿಯುತ್ತಾರೆ. ಆ ರೀತಿ ಫೋರ್ಜರಿ ಮಾಡಿರುವುದನ್ನು ಯಾವುದಾದರೂ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುತೆತೇನಾ ಎಂದರೆ ಸಾಕ್ಷಿ ತರೀಕೆರೆ ಎ ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ನಾನು 2014-15 ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಅದಕ್ಕೂ ಮೊದಲು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಅದೇರೀತಿ ಫೋರ್ಜರಿಯನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಎ ಸಿ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಾಖಲೆ ನನ್ನ

ಬಳಿ ಇದ್ದು, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಪಿ-8 ರ ಡಿ ಸಿ ಆದೇಶದಲ್ಲಿ 7 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುವುದನ್ನು ವಜಾ ಮಾಡಿಲ್ಲ ಎಂದರೆ ಸಾಕ್ಷಿ ವಜಾ ಆಗಿದೆ ಎಂದು ನುಡಿಯುತ್ತಾರೆ. ಅಂತಹ ಯಾವುದೇ ಆದೇಶವಾಗದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಅಜ್ಜನ ಆಸ್ತಿಯಲ್ಲಿ ಪಾಲು ಬರಬೇಕು ಎಂದು ನುಡಿಯುತ್ತಾರೆ. ಎಷ್ಟು ಹಿಸ್ಸೆ ಕೇಳಿರುತ್ತೇನೆ ಎಂದರೆ ಸಾಕ್ಷಿ ಸಮ ಅರ್ಧ ಭಾಗ ಎಂದು ನುಡಿಯುತ್ತಾರೆ. ಓ ಎಸ್ ನಂ.111/2006 ರ ದಾವೆಯಲ್ಲಿ ನಮಗೆ ಯಾವುದೇ ಹಕ್ಕಿರುವುದಿಲ್ಲ ಎಂದು ತೀರ್ಪು ಬಂದಿದ್ದರೂ ಸಹ ಅದನ್ನು ಪ್ರಶ್ನಿಸದೆ ನಾನು ವಿನಃ ಕಾರಣ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿ ಓ ಎಸ್ ನಂ.111/2006 ರ ದಾವೆಯನ್ನು ನಾನು ಹೂಡಿಲ್ಲ ಎಂದು ನುಡಿಯುತ್ತಾರೆ.

ಆದಾದ ನಂತರ ಹನುಮಂತಪ್ಪರವರ ಮಗನಾದ ಶಶಿಕುಮಾರ್ ರವರು ಪ್ರತಿವಾದಿ 9 ರಿಂದ 13 ರವರ ವಿರುದ್ಧ ಓ ಎಸ್ ನಂ.396/2015 ರಂತೆ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 12/03/2016 ರಂದು ಸದರಿ ದಾವೆಯ ಅಂತಿಮ ತೀರ್ಪು ಆಗಿದ್ದು ಅದರಂತೆ ಪ್ರಸ್ತುತ ದಾವಾ

ಸ್ವತ್ತು 8 ನೇ ಪ್ರತಿವಾದಿ ಶಶಿಕುಮಾರ್ ರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಆ ದಾವೆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂದಿನಿಂದ 8 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸುಳ್ಳು. ನಾನು ದಾವಾ ಸ್ವತ್ತಿನ ಮಾಲೀಕನು ಅಲ್ಲ ಅನುಭವದಾರನು ಅಲ್ಲ ಎಂದರೆ ಸುಳ್ಳು. ದಾವಾ ಆಸ್ತಿಗೆ ಸಂಬಂದಪಟ್ಟಂತೆ ಈಗಾಗಲೇ ಓ ಎಸ್ ನಂ.111/2006 ರಲ್ಲಿ ತೀರ್ಪು ಆಗಿರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಆಸ್ತಿಯನ್ನು ಪಡೆಯಲು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎ ಸಿ ಮತ್ತು ಡಿ ಸಿ ನ್ಯಾಯಾಲಯಗಳಲ್ಲಿ ನನ್ನ ಪರವಾಗಿ ಯಾವುದೇ ಆದೇಶವಾಗಿಲ್ಲ ಎಂದರೆ ಸಾಕ್ಷಿ ನನ್ನ ಪರವಾಗಿ ಆದೇಶವಾಗಿದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.